ಸರ್ಕಾರದ ಆದೇಶಗಳ ಪಾಲನೆ

750 - ಶ್ರೀ ಬಸವರಾಜ ಮಂಡಿಮಠ್ ಜಿ. (ಚಳ್ಳಕೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಾರ್ವಜನಿಕ ಹಿತಾಸಕ್ತಿಯ ವಿಷಯಗಳ ಬಗೆಗಿನ ಶಾಸಕ ಮನವಿ ಪತ್ರಗಳಿಗೆ ಸಮರ್ಪಕ ಉತ್ತರಗಳನ್ನು ನೀಡುವ ಬಗ್ಗೆ ಆದೇಶಗಳೇನಾದರೂ ನೀಡಲಾಗಿದೆಯೇ, ಹಾಗಿದ್ದಲ್ಲಿ ಅದು ಪಾಲನೆ ಆಗುತ್ತಿದೆಯೇ?*

ಆ) *ಪಾಲನೆ ಮಾಡದವರ ಅಧಿಕಾರಿ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?*

ಇ) *ವಿಶೇಷವಾಗಿ ಕಂದಾಯ, ಆಹಾರ ಮತ್ತು ನಾಗರೀಕ ಪೂರೈಕೆ, ಗ್ರಾಮೀಣಾಭಿವೃದ್ಧಿ ಇಲಾಖೆಗಳ ಅಡಳಿತ ವರ್ಗವು ಉದ್ದೇಶ ಪೂರ್ವಕವಾಗಿ ಉತ್ತರ ನೀಡಲು ಧಿಕ್ಕರಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಯಾವ ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ನಿರ್ದಿಷ್ಟ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ.

ಸೇಡಂ ತಾಲ್ಲೂಕಿನ ವಿದ್ಯುತ್ ಮಂಡಳಿ ಕಛೇರಿಯಲ್ಲಿ ಅವ್ಯವಹಾರ

754 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವಿದ್ಯುಚ್ಛಕ್ತಿ ಮಂಡಳಿ ಕಛೇರಿಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?*

ಇ) *ಆಂಧ್ರ ಗಡಿ ಪ್ರಾಂತ್ಯ ಭಾಗದಲ್ಲಿಯ ಗ್ರಾಮಗಳಿಗೆ ವಿದ್ಯುತ್ ಕಂಬಗಳು, ತಂತಿ, ಟಿ.ಸಿ. ಇತ್ಯಾದಿ ಸಾಮಗ್ರಿಗಳನ್ನು ಕಳ್ಳಸಾಗಣೆಯಾಗುವುದು ನಿಜವಲ್ಲವೇ?*

ಈ) *ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು?*

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವಿದ್ಯುಚ್ಛಕ್ತಿ ಮಂಡಳಿ ಕಛೇರಿಯಲ್ಲಿ ನಡೆದಿರಬಹುದಾದ ಅವ್ಯವಹಾರದ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಅ) ಅವ್ಯವಹಾರ ನಡೆದಿದ್ದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಆಂಧ್ರ ಗಡಿಪ್ರಾಂತ್ಯ ಗಡಿ ಗ್ರಾಮಗಳಲ್ಲಿ ವಿದ್ಯುತ್ ಸಾಮಾಗ್ರಿಗಳನ್ನು ಕಳ್ಳತನದಿಂದ ಸಾಗಾಣಿಕೆಯಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿರುವುದಿಲ್ಲ.

ಈ) ಕಳ್ಳ ಸಾಗಾಣಿಕೆಯಾಗುವುದರ ನಿರ್ದಿಷ್ಟ ಆಧಾರಗಳು ದೊರೆತರೆ ತಪ್ಪಿತಸ್ಥರ ವಿರುದ್ಧ ನಿಗಮದ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳಲಾಗುವುದು. ಜಾಗೃತದಳ ಗುಲ್ಬರ್ಗಾ ಇವರಿಗೆ ಸೇಡಂ ಉಪ ವಿಭಾಗದ ಮೇಲೆ ಈ ವಿಷಯದಲ್ಲಿ ನಿಗಾ ವಹಿಸಲು ತಿಳಿಸಲಾಗಿದೆ.

ಹಿಪ್ಪರಗಿ ಬ್ಯಾರೇಜ್ ಯೋಜನೆ

756 - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಬ್ಯಾರೇಜ್ ಯೋಜನೆಗೆ ಪ್ರಸಕ್ತ ವರ್ಷದಲ್ಲಿ ಒದಗಿಸಿದ ಹಣ ಎಷ್ಟು?

ಆ) ಈ ಯೋಜನೆಯನ್ನು ಪೂರ್ಣಗೊಳಿಸಲಿಕ್ಕೆ ಇನ್ನೂ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಹೆಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ರೂ. 33.30 ಕೋಟಿ ರೂಪಾಯಿಗಳನ್ನು ಒದಗಿಸಿದೆ.

ಆ) ಈ ಯೋಜನೆಯನ್ನು 9ನೇ ಪಂಚ ವಾರ್ಷಿಕ ಯೋಜನಾ ಅವಧಿಯ ಒಳಗಾಗಿ ಅಂದರೆ ಕ್ರಿ.ಶ. 2002ರ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಕೃಷ್ಣಾ ನದಿಯಿಂದ ಕೆರೆಗಳಿಗೆ ನೀರು ಸರಬರಾಜು

759 - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಬಾಗೇವಾಡಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮನಗೋಳಿ, ಮಮದಾಪೂರೆ, ದೇವರಗೆನ್ನೂರೆ ಮತ್ತು ನಂದಿ ಸಕ್ಕರೆ ಕಾರ್ಖಾನೆಗಳಲ್ಲಿನ ವಿದ್ಯುಚ್ಛಕ್ತಿ ಸಬ್ ಸ್ಟೇಶನ್‌ಗಳ ಕಾಮಗಾರಿಯು ಈಗ ಯಾವ ಹಂತದಲ್ಲಿದೆ?

ಆ) ಇವುಗಳ ಕಾರ್ಯ ವಿಳಂಬವಾಗಲಿಕ್ಕೆ ಕಾರಣಗಳೇನು? ಮತ್ತು ಇವುಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮನಗೋಳಿಯಲ್ಲಿ 2x5 ಎಂ.ವಿ.ಎ, 33:11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು